Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in principal@klsvdit.edu.in**

Date: 09-09-2022

**ಪತ್ರಿಕಾ ಪ್ರಕಟಣೆ:**

# ಕೆ–ಟೆಕ್ ವತಿಯಿಂದ ಪ್ರೌಢಶಾಲೆಗಳಲ್ಲಿ ಔದ್ಯಮಶೀಲತೆಯ ಅರಿವು ಮೂಡಿಸುವ ಕಾರ್ಯಕ್ರಮ

ಕೆ.ಎಲ್.ಎಸ್. ವಿ.ಡಿ.ಐ.ಟಿ. ಹಳಿಯಾಳವು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಔದ್ಯಮಶೀಲತೆಯ ಕುರಿತು ಅರಿವು ಮೂಡಿಸುವ ಒಂದು ದಿನದ ಕಾರ್ಯಾಗಾರವನ್ನು ಸರಕಾರಿ ಹೆಣ್ಣುಮಕ್ಕಳ ಪ್ರೌಢಶಾಲೆ ಜವಳಿಗಲ್ಲಿ ಯಲ್ಲಿ ಸಪ್ಟೆಂಬರ್ 9ರಂದು ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಹುಬ್ಬಳ್ಳಿಯ ದೇಶಪಾಂಡೆ ಫೌಂಡೇಶನ್ ಸಂಸ್ಥೆಯಿಂದ ಶ್ರೀ.ರಾಕೇಶ್,ಶ್ರೀ.ರಕ್ಷಿತ ಕಲ್ಯಾಣಿ ಹಾಗೂ ಶ್ರೀ.ಬಾಲಾಜಿ ಬಿ ಕೆ ಅವರು ಆಗಮಿಸಿದ್ದರು. ಶ್ರೀ.ರಾಕೇಶ್ ಅವರು ಔದ್ಯಮಶೀಲತೆ ಎಂದರೇನು? ಔದ್ಯಮಶೀಲತೆ ಯಿಂದ ಸಮಾಜದ ಪೂರಕ ಬೆಳವಣಿಗೆ ಹೇಗೆ ಸಾಧ್ಯ? ಎಂದು ವಿದ್ಯಾರ್ಥಿನಿಯರಿಗೆ ವಿವರಿಸಿದರು. ಶ್ರೀ. ರಕ್ಷಿತ ಕಲ್ಯಾಣಿ ಅವರು ಉದ್ಯಮಶೀಲತೆ ವಿವಿಧ ಹಂತಗಳು, ಕಲ್ಪನೆಯನ್ನು ಉತ್ಪನ್ನವಾಗಿ ಪರಿವರ್ತಿಸುವ ಪರಿಯನ್ನು ತೆರೆದಿಟ್ಟರು. ಶ್ರೀ. ಬಾಲಾಜಿಯವರು ಉದ್ಯಮ ಪ್ರಾರಂಭಿಸುವ ಹಂತದಲ್ಲಿ ಎದುರಾಗುವ ಸಮಸ್ಯೆಗಳು ಹಾಗೂ ಅವುಗಳನ್ನು ಎದುರಿಸುವ ಬಗೆಯನ್ನು ಸವಿಸ್ತಾರವಾಗಿ ವಿವರಿಸಿದರು.

ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ವಿ.ಎ.ಕುಲಕರ್ಣಿ ಅವರು ಔದ್ಯಮಶೀಲತೆಯ ಪರಿಕಲ್ಪನೆ ವಿದ್ಯಾರ್ಥಿಗಳಲ್ಲಿ ಇದ್ದರೆ, ಉದ್ಯೋಗ ಸೃಷ್ಟಿಸಿಕೊಳ್ಳುವ ಸಾಮರ್ಥ್ಯ ಬೆಳೆಯುತ್ತದೆ ಎಂದು ನುಡಿದರು. ಮಹಾವಿದ್ಯಾಲಯವು ಕೆ– ಟೆಕ್ ನೈನ್ ಸೂಚನಾ ಅನುಸಾರವಾಗಿ ಸರಕಾರಿ ಹೆಣ್ಣು ಮಕ್ಕಳ ಪ್ರೌಢಶಾಲೆ ಜವಳಿಗಲ್ಲಿ ಯನ್ನು ದತ್ತು ತೆಗೆದುಕೊಂಡಿದ್ದು, ವಿದ್ಯಾರ್ಥಿಗಳಿಗೆ ಉದ್ಯಮಶೀಲತೆಯ ಅರಿವು ಮೂಡಿಸುವ ಕಾರ್ಯಕ್ರಮವನ್ನು ನಿರಂತರವಾಗಿ ಹಮ್ಮಿಕೊಳ್ಳಲಿದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಮಹಾವಿದ್ಯಾಲಯದ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ 4ನೇ ವರ್ಷದ ವಿದ್ಯಾರ್ಥಿನಿ ಕುಮಾರಿ. ಕೀರ್ತಿ ಮಠದ್ ಹಾಗೂ ದ್ವಿತೀಯ ವರ್ಷದ ವಿದ್ಯಾರ್ಥಿ ಕು. ಕೇಶವ್ ಕೆ–ಟೆಕ್ ನೈನ್ ಅಡಿಯಲ್ಲಿ ತಾವು ಮಾಡಿರುವ ಯೋಜನಾ ಕಾರ್ಯವನ್ನು ವಿವರಿಸಿದರು. ಕೆ–ಟೆಕ್ ನೈನ್ ಸಂಚಾಲಕರಾದ ಡಾ. ಕೆ. ಎಸ್. ಪೂಜಾರ್ ಅವರು ಪ್ರೌಢ ಶಾಲಾ ಆಡಳಿತ ಮಂಡಳಿ ಹಾಗೂ ಶಿಕ್ಷಕರ ಸಹಕಾರಕ್ಕೆ ಧನ್ಯವಾದ ಅರ್ಪಿಸಿದರು. ಪ್ರೊ. ನವೀನ್ ಹಿರೇಮಠ ಕಾರ್ಯಕ್ರಮ ಸಂಯೋಜಿಸಿದರು. ಕರ್ನಾಟಕ ರಾಜ್ಯ ಸರ್ಕಾರದ ಐಟಿ–ಬಿಟಿ ಇಲಾಖೆಯ ಅಂಗ ಸಂಸ್ಥೆಯಾದ ಕೆ–ಟೆಕ್ ನ್ಯೂ ಇನ್ನೋವೇಶನ್ ನೆಟ್ವರ್ಕ್ ನ ಯುವ ಔದ್ಯಮಶೀಲ ಕಾರ್ಯಕ್ರಮದ ಅಡಿಯಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಪ್ರಾಂಶುಪಾಲರು

**Principal**
**KLS Vishwanathrao Deshpande Institute of Technology, Haliyal**

